# <u>ಮಂಗಳೂರು ವಿಶ್ವವಿದ್ಯಾನಿಲಯ</u>

**ದಿನಾಂಕ 30.12.2024ರಂದು ಪೂರ್ವಾಹ್ನ ಗಂಟೆ 10.30ಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟು ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2024ನೇ ಸಾಲಿನ ಎಂಟನೇ ಸಾಮಾನ್ಯ ಸಭೆಯ ನಡವಳಿಗಳು.**

**ಉಪಸ್ಥಿತರು :**

| | | | |
|---|---|---|---|
| 1. | ಪ್ರೊ ಪಿ ಎಲ್.ಧರ್ಮ<br>ಕುಲಪತಿಗಳು | ಅಧ್ಯಕ್ಷರು | |
| 2. | ಡಾ ರಾಮೇಗೌಡ ಎಂ<br>ಜಂಟಿ ನಿರ್ದೇಶಕರು (ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು | |
| 3. | ಪ್ರೊ. ಪರಿಣಿತ<br>ಡೀನರು, ಕಲಾ ನಿಕಾಯ | ಸದಸ್ಯರು | |
| 4. | ಡಾ ಎಸ್.ಬಿ ಎಂ ಪ್ರಸನ್ನ | ಸದಸ್ಯರು | |
| 5. | ಡಾ ಕೆ.ಸಿ. ಮಹದೇಶ | ಸದಸ್ಯರು | |
| 6. | ಡಾ ವರದರಾಜ ಸಿ ಎಚ್. | ಸದಸ್ಯರು | |
| 7. | ಶ್ರೀ ಸುರೇಶ್ ಕುಮಾರ್ ಬಿ. ನಾವೂರು | ಸದಸ್ಯರು | |
| 8. | ಶ್ರೀ. ಸಿ.ಎ. ನಿತಿನ್ ಜೆ ಶೆಟ್ಟಿ | ಸದಸ್ಯರು | |
| 9. | ಶ್ರೀಮತಿ ಜೂಡಿತ್ ಮೆಂಡೋನ್ಸ | ಸದಸ್ಯರು | |
| 10. | ಶ್ರೀ ರಘುರಾಜ್ | ಸದಸ್ಯರು | |
| 11. | ಶ್ರೀ ಅಚ್ಯುತ ಗಟ್ಟಿ | ಸದಸ್ಯರು | |
| 12. | ಶ್ರೀ ಮಹಮ್ಮದ್ ಸವಾದ್ | ಸದಸ್ಯರು | |
| 13. | ಡಾ. ಸಂದೇಶ್ ಕೆ.ಎಸ್.,<br>(ವೈದ್ಯಕೀಯ ಶಿಕ್ಷಣ ನಿರ್ದೇಶಕರ ಪರವಾಗಿ) | ಸದಸ್ಯರು | ಆನ್‌ಲೈನ್ ಮೂಲಕ |
| 14. | ಪ್ರೊ ಹೆಚ್. ದೇವೆಂದ್ರಪ್ಪ<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು | |
| 15. | ಪ್ರೊ ಸಂಗಪ್ಪ ವೈ<br>ಹಣಕಾಸು ಅಧಿಕಾರಿ (ಪ್ರಭಾರ) | ವಿಶೇಷ ಆಹ್ವಾನಿತರು | |
| 16. | ಶ್ರೀ ಕೆ ರಾಜು ಮೊಗವೀರ, ಕೆ.ಎ.ಎಸ್.<br>ಕುಲಸಚಿವರು (ಆಡಳಿತ) | ಸದಸ್ಯ ಕಾರ್ಯದರ್ಶಿ | |

**ಅನುಪಸ್ಥಿತರು:**

| | | |
|---|---|---|
| 1. | ಡಾ. ಶಂಕರಮೂರ್ತಿ ಎಚ್.ಕೆ | ಸದಸ್ಯರು |

## ಪ್ರಾರಂಭಿಕ

**ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.**

## ಪ್ರಾಸ್ತಾವಿಕ

**ಈ ಕೆಳಗಿನ ವಿಷಯಗಳನ್ನು ಸಭೆಯ ಗಮನಕ್ಕೆ ತರಲಾಯಿತು.**

1) ಮಂಗಳೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಗಳು ಯಶಸ್ವಿಯಾಗಿ ಜರುಗಿರುತ್ತದೆ. ವಿಜೇತ ತಂಡದ ವಿದ್ಯಾರ್ಥಿಗಳು ಬೆಂಗಳೂರಿನ ಕ್ರೈಸ್ಟ್ ವಿಶ್ವವಿದ್ಯಾನಿಲಯದಲ್ಲಿ ನಡೆದ ದಕ್ಷಿಣ ವಲಯ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಿ ರನ್ನರ್ಸ್ ಅಪ್ ಸ್ಥಾನವನ್ನು ಪಡೆದು, ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಸಾಂಸ್ಕೃತಿಕ ಸ್ಪರ್ಧೆಗೆ ಭಾಗವಹಿಸಲು ಅರ್ಹತೆ ಪಡೆದಿರುತ್ತಾರೆ.

2) Cardiff Metropolitan University ಯೊಂದಿಗೆ ಮಾಡಿಕೊಂಡ ಒಡಂಬಡಿಕೆಯಂತೆ, ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ 2024ರ ಡಿಸೆಂಬರ್ 16 ಮತ್ತು 17 ರಂದು ಎರಡು ದಿನಗಳ ಅಂತರಾಷ್ಟ್ರೀಯ ಸಮ್ಮೇಳನ - International Conference on Responsible Artificial Intelligence (ICRAI 2024) ಯಶಸ್ವಿಯಾಗಿ ಜರುಗಿರುತ್ತದೆ.

3) 2025ನೇ ಸಾಲಿನ ವಾರ್ಷಿಕ ಘಟಿಕೋತ್ಸವಕ್ಕೆ ಸಂಬಂಧಿಸಿದಂತೆ ಪೂರ್ವ ತಯಾರಿಗಳನ್ನು ಮಾಡಿಕೊಳ್ಳುತ್ತಿರುವುದಾಗಿ ಸಭೆಗೆ ತಿಳಿಸಲಾಯಿತು. ಸದರಿ ಘಟಿಕೋತ್ಸವಕ್ಕೆ ಮುಖ್ಯ ಅತಿಥಿಯ ಹೆಸರನ್ನು ಅಂತಿಮಗೊಳಿಸುವ ನಿಟ್ಟಿನಲ್ಲಿ ಮಾನ್ಯ ಸಿಂಡಿಕೇಟು ಸದಸ್ಯರುಗಳ ಸಲಹೆ ಸೂಚನೆಗಳನ್ನು ಕೋರಲಾಯಿತು.

4) ಕ್ರಿಸ್‌ಮಸ್ ರಜೆಯ ನಂತರ 2025ರ ಜನವರಿ 2ನೇ ತಾರೀಕಿನಿಂದ ಪರೀಕ್ಷೆಗಳು ಮರು ಪ್ರಾರಂಭವಾಗಲಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.

5) 2025ರ ಜನವರಿ 29 ರಿಂದ 31 ರವರೆಗೆ ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನ- International Association of Radiation Protection (IARP) ವಿಶ್ವವಿದ್ಯಾನಿಲಯದ ಆವರಣದಲ್ಲಿ ಜರುಗಲಿದ್ದು, ಇದಕ್ಕೆ ಸಂಬಂಧಿಸಿದ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಸದರಿ ಸಮ್ಮೇಳನದಲ್ಲಿ ಖ್ಯಾತ ವಿಜ್ಞಾನಿಗಳು ಸೇರಿದಂತೆ ಹಲವು ಸಂಶೋಧಕರು ಭಾಗಿಯಾಗಲಿದ್ದಾರೆ.

**I ನಡವಳಿಗಳ ದೃಢೀಕರಣ**

**1) ದಿನಾಂಕ 09.12.2024ರಂದು ನಡೆದ ಸಿಂಡಿಕೇಟಿನ 2024ನೇ ಸಾಲಿನ ಏಳನೇ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ**

1) ಕಾರ್ಯಸೂಚಿ ಸಂಖ್ಯೆ : ಎಸಿಸಿ:ಸಾ.ಸ.7:1(2024)ಕ್ಕೆ ಸಂಬಂಧಿಸಿದ ನಿರ್ಣಯವನ್ನು ಈ ಕೆಳಗಿನಂತೆ ತಿದ್ದುಪಡಿ ಮಾಡಲಾಗಿದೆ.

**ವಿಷಯ**: ಶೈಕ್ಷಣಿಕ ವರ್ಷ 2025-26ನೇ ಸಾಲಿನ ಕಾಲೇಜುಗಳ ಸಂಯೋಜನಾ ಶುಲ್ಕದ ಬಗ್ಗೆ.

**ತಿದ್ದುಪಡಿ ನಿರ್ಣಯ**: ಅನುಮೋದಿಸಲಾಯಿತು.

2) ದಿನಾಂಕ 09.12.2024ರಂದು ನಡೆದ ಸಿಂಡಿಕೇಟು ಸಭೆಯಲ್ಲಿ, ದಿನಾಂಕ 15.11.2024ರಂದು ನಡೆದ ಸಿಂಡಿಕೇಟಿನ 2024ನೇ ಸಾಲಿನ ಚತುರ್ಥ ವಿಶೇಷ ಸಭೆಯ ನಡವಳಿಯ ದೃಢೀಕರಣದ ಸಂದರ್ಭದಲ್ಲಿ, ವಿಶ್ವವಿದ್ಯಾನಿಲಯದ ಹಣಕಾಸು ವಹಿವಾಟುಗಳನ್ನು Double Entry System ಮೂಲಕ ದಾಖಲಿಸುವ ಬಗ್ಗೆ ಕೈಗೊಂಡ ನಿರ್ಣಯದ ಅನುಷ್ಠಾನದ ಕುರಿತು, ಜನವರಿ 1, 2025 ರಿಂದಲೇ ಪ್ರಾರಂಭಿಸುವುದು ಸೂಕ್ತವೆಂದು ಅಭಿಪ್ರಾಯಪಡಲಾಗಿತ್ತು. ಈ ಬಗ್ಗೆ ಅಗತ್ಯವಿರುವ Tally Prime Software ನ್ನು ಖರೀದಿಸುವ ನಿಟ್ಟಿನಲ್ಲಿ ಖರೀದಿ ಸಮಿತಿಗೆ ಹಾಗೂ ಸಿಂಡಿಕೇಟಿನ ಘಟನೋತ್ತರ ಅನುಮೋದನೆಗೆ ಮಂಡಿಸಲು ನಿರ್ಣಯಿಸಲಾಗಿತ್ತು.

ಸದರಿ ಪ್ರಕ್ರಿಯೆ ವಿಳಂಬಗೊಂಡಿರುವುದನ್ನು ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ಸಿ.ಎ. ನಿತಿನ್ ಜೆ. ಶೆಟ್ಟಿ ಇವರು ಆಕ್ಷೇಪಿಸಿದ್ದ ಹಿನ್ನೆಲೆಯಲ್ಲಿ 04.01.2025ರೊಳಗೆ, ಖರೀದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಮುಂದಿನ ಸಿಂಡಿಕೇಟು ಸಭೆಯ ಘಟನೋತ್ತರ ಅನುಮೋದನೆಗೆ ಕಾರ್ಯಸೂಚಿ ಮಂಡಿಸಲು ಮತ್ತೊಮ್ಮೆ ನಿರ್ಣಯಿಸಲಾಯಿತು.

**ಉಳಿದಂತೆ ನಡವಳಿಯನ್ನು ದೃಢೀಕರಿಸಲಾಯಿತು**

**II. ಅನುಸರಣಾ ವರದಿಯ ಅನುಮೋದನೆ**

**1) ದಿನಾಂಕ 29.10.2024ರಂದು ನಡೆದ ಸಿಂಡಿಕೇಟಿನ 2024ನೇ ಸಾಲಿನ ಆರನೇ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.**

**- ಅನುಮೋದಿಸಲಾಯಿತು -**

**2) ದಿನಾಂಕ 15.11.2024ರಂದು ನಡೆದ ಸಿಂಡಿಕೇಟಿನ 2024ನೇ ಸಾಲಿನ ಚತುರ್ಥ ವಿಶೇಷ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.**

**- ಅನುಮೋದಿಸಲಾಯಿತು -**

**III. ಈ ಸಿಂಡಿಕೇಟು ಸಭೆಗೆ ಮಂಡಿಸಲಿರುವ ಕಾರ್ಯಸೂಚಿಗಳು.**

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.8:1 (2024)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ 43ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮದ ಬಗ್ಗೆ.

**ನಿರ್ಣಯ:** ಘಟಿಕೋತ್ಸವಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಕ್ರಿಯೆಗಳನ್ನು ಕಾಲಮಿತಿಯೊಳಗೆ ಸಂಪೂರ್ಣಗೊಳಿಸಲು ಹಾಗೂ ಗೌರವ ಡಾಕ್ಟರೇಟ್‌ಗೆ ಸಂಬಂಧಿಸಿದ ಅರ್ಜಿಗಳನ್ನು ವಿವರಗಳ ಸಹಿತ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು. ಘಟಿಕೋತ್ಸವದ ದಿನಾಂಕ ನಿಗದಿಗೊಳಿಸುವ ಸಲುವಾಗಿ ಘನತೆವೆತ್ತ ಕುಲಾಧಿಪತಿಗಳ ದಿನಾಂಕ ಪಡೆಯಲು ರಾಜಭವನಕ್ಕೆ ಪತ್ರ ಬರೆಯಲು ತೀರ್ಮಾನಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.8:2 (2024)

ವಿಷಯ: ಅಧ್ಯಯನ ಮಂಡಳಿಗಳ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಗಳ ಪುನರ್ರಚನೆಯ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.8:3 (2024)

ವಿಷಯ: ಪದವಿ ಮತ್ತು ಸ್ನಾತಕೋತ್ತರ ಸೂಕ್ಷ್ಮಾಣು ಜೀವವಿಜ್ಞಾನ ಸಂಯುಕ್ತ ಅಧ್ಯಯನ ಮಂಡಳಿಯನ್ನು ಸ್ನಾತಕೋತ್ತರ ಜೀವ ವಿಜ್ಞಾನ ಅಧ್ಯಯನ ಮಂಡಳಿಯೊಂದಿಗೆ ವಿಲೀನಗೊಳಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.8:4 (2024)

ವಿಷಯ: ವ್ಯವಹಾರ ಆಡಳಿತ ಹಾಗೂ ವ್ಯವಹಾರ ನಿರ್ವಹಣೆ, ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ ಅಧ್ಯಯನ ಮಂಡಳಿಗಳನ್ನು ಸಂಯುಕ್ತ ಅಧ್ಯಯನ ಮಂಡಳಿಯನ್ನಾಗಿ ರಚಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.8:5 (2024)

ವಿಷಯ: CARER ಕೇಂದ್ರದ ಪ್ರಯೋಗಾಲಯದ ಸಂಶೋಧನಾ ಕಾರ್ಯಗಳಿಗೆ ಅಗತ್ಯವಿರುವ ಗ್ಲಾಸ್‌ವೇರ್‌ಗಳನ್ನು ಖರೀದಿಸುವ ಇಂಡೆಂಟಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.8:6 (2024)

ವಿಷಯ: CARER ಕೇಂದ್ರದ ಪ್ರಯೋಗಾಲಯದ ಸಂಶೋಧನಾ ಕಾರ್ಯಗಳಿಗೆ ಅಗತ್ಯವಿರುವ ರಾಸಾಯನಿಕಗಳನ್ನು ಖರೀದಿಸುವ ಇಂಡೆಂಟಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.8:7 (2024)

ವಿಷಯ: ಡಾ. ಮೊಹಮ್ಮದ್ ಶಫಿಯುಲ್ ಮುಸ್ತಕ್ ಬಿ., ಪ್ರಾಧ್ಯಾಪಕರು, ಅನ್ವಯಿಕ ಪ್ರಾಣಿಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ Thailand ಇಲ್ಲಿ MedHackathon 2025 ಸಭೆಯಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆಯಾಗದಂತೆ ಅನುಮತಿ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.8:8 (2024)

ವಿಷಯ: **ಶ್ರೀ ಅಚ್ಚುತ ಗಟ್ಟಿ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.**

ವಿಷಯ 1 : ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಪುರುಷರ ವಸತಿ ನಿಲಯದಲ್ಲಿರುವ ಮಕ್ಕಳ ಸಂಖ್ಯೆ ಎಷ್ಟು, ವಸತಿ ನಿಲಯದಲ್ಲಿರುವ ಪ.ಜಾತಿ/ ಪ.ಪಂಗಡಗಳ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ವಿದ್ಯಾರ್ಥಿಗಳಿಗೆ ವಸತಿ ನಿಲಯದ ಮಾಸಿಕ ಫೀಸು ಎಷ್ಟು, ಈ ಬಗ್ಗೆ ವಿವರಣೆ.

**ನಿರ್ಣಯ:** ಈ ಕುರಿತ ಪೂರ್ಣ ಮಾಹಿತಿಯನ್ನು ಸಭೆಯ ಗಮನಕ್ಕೆ ತರಲಾಯಿತು.

ವಿಷಯ 2 : ವಿಶ್ವವಿದ್ಯಾನಿಲಯದ ಮಹಿಳಾ ವಸತಿ ಗೃಹದಲ್ಲಿರುವ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು. ವಸತಿ ನಿಲಯದಲ್ಲಿರುವ ಪ.ಜಾತಿ / ಪ.ಪಂಗಡಗಳ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು ವಿದ್ಯಾರ್ಥಿನಿಯರಿಗೆ ವಸತಿ ನಿಲಯದ ಮಾಸಿಕ ಫೀಸು ಎಷ್ಟು ಈ ಬಗ್ಗೆ ವಿವರಣೆ.

**ನಿರ್ಣಯ:** ಈ ಕುರಿತ ಪೂರ್ಣ ಮಾಹಿತಿಯನ್ನು ಸಭೆಯ ಗಮನಕ್ಕೆ ತರಲಾಯಿತು.

ವಿಷಯ 3 : ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಉದ್ಯೋಗಿಗಳ ವಸತಿ ಗೃಹ, ವಿದ್ಯಾರ್ಥಿ ವಿದ್ಯಾರ್ಥಿನಿಯರ ವಸತಿ ಗೃಹ, ವಿ.ವಿ. ಕ್ಯಾಂಟೀನ್, ಅತಿಥಿ ಗೃಹಗಳ ಸಭೆ ಸಮಾರಂಭಗಳ ಹಸಿ ಕಸಗಳನ್ನು ವಿ.ವಿ. ಆವರಣದಲ್ಲಿರುವ ಟೆಲಿಫೋನ್ ಎಕ್ಸ್‌ಚೇಂಜ್ ಬಳಿ ಹಸಿ ತ್ಯಾಜ್ಯ ಘಟಕದ ಸ್ಥಾಪನೆ ಮಾಡಿ ಗೊಬ್ಬರವನ್ನಾಗಿ ಮಾಡುವ ಘಟಕವನ್ನು ಅತೀ ಶೀಘ್ರವಾಗಿ ಮಾಡುವುದರ ಬಗ್ಗೆ ಕ್ರಮವಹಿಸುವುದು.

**ನಿರ್ಣಯ:** ಈಗಾಗಲೇ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಒಣ ತ್ಯಾಜ್ಯ ನಿರ್ವಹಣಾ ಘಟಕದ ಮಾಹಿತಿಯನ್ನು ಸಭೆಗೆ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.8:9 (2024)

ವಿಷಯ: ಡಾ.ಕೆ.ಸಿ. ಮಹದೇಶ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

ವಿಷಯ 1 : ಪ್ರತಿಷ್ಠಿತ ಮಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರ ನಿವೃತ್ತಿ ಬಾಕಿ ವೇತನ, ಉಳಿಕೆ ರಜಾ ದಿನ ವೇತನ ಬಾಕಿ ಮತ್ತು ಅವರ ನಿವೃತ್ತಿ ವೇತನದ ಬಿಡುಗಡೆಯ ಬಗ್ಗೆ ಚರ್ಚಿಸಿ ನಿರ್ಣಯಿಸಲು ಕೋರಿದೆ.

**ನಿರ್ಣಯ:** ಸರ್ಕಾರದಿಂದ ಬಿಡುಗಡೆಯಾಗಲಿರುವ ಅನುದಾನವನ್ನು ಶೀಘ್ರವಾಗಿ ಪಡೆದು ನಿವೃತ್ತಿಯಾದವರಿಗೆ ಪಾವತಿಸಲು ನಿರ್ಣಯಿಸಲಾಯಿತು. ನಿವೃತ್ತಿ ವೇತನ ಅನುದಾನ ಬಿಡುಗಡೆಗೆ ಸಂಬಂಧಿಸಿ, ಸರ್ಕಾರಕ್ಕೆ ಬರೆದ ಪತ್ರಗಳ ಪ್ರತಿಗಳನ್ನು ಮಾನ್ಯ ಸಿಂಡಿಕೇಟು ಸದಸ್ಯರುಗಳಿಗೆ ನೀಡಲು ಸೂಚಿಸಲಾಯಿತು.

ನಿವೃತ್ತಿ ವೇತನದಾರರ ಬಗ್ಗೆ ಯಾವುದೇ ಲೆಕ್ಕ ಪರಿಶೋಧನಾ ಆಕ್ಷೇಪಣೆ / ವಸೂಲಾತಿ ಇದ್ದಲ್ಲಿ ಕೆ.ಸಿ.ಎಸ್.ಆರ್. ನಿಯಮಾವಳಿ ಪ್ರಕಾರ ಪ್ರಕರಣವನ್ನು ಇತ್ಯರ್ಥಗೊಳಿಸಲು ತೀರ್ಮಾನಿಸಲಾಯಿತು.

ವಿಷಯ 2 : 2024-2025 ಸಾಲಿನ ತಾತ್ಕಾಲಿಕ ನೌಕರರ ಮತ್ತು ಹೊರಗುತ್ತಿಗೆ ನೌಕರರನ್ನು ವಿಶ್ವವಿದ್ಯಾನಿಲಯಕ್ಕೆ ನೇಮಿಸಿಕೊಳ್ಳಲು ಸರ್ಕಾರದ ಅನುಮತಿ ಪಡೆಯಲಾಗಿದೆಯಾ? ಮತ್ತು ಸರ್ಕಾರ ಎಷ್ಟು ಸಂಖ್ಯೆಯ ನೌಕರರನ್ನು ನೇಮಿಸಿಕೊಳ್ಳಲು ಅನುಮತಿ ನೀಡಿದೆ ತಿಳಿಸಿ. ಈ ವಿಚಾರವನ್ನು ಚರ್ಚಿಸಿ ನಿರ್ಣಯಿಸಲು ಕೋರಿದೆ.

**ನಿರ್ಣಯ:** ವಿಶ್ವವಿದ್ಯಾನಿಲಯದಲ್ಲಿ ಅಗತ್ಯಕ್ಕೆ ತಕ್ಕಂತೆ ತಾತ್ಕಾಲಿಕ / ಹೊರಗುತ್ತಿಗೆ ನೌಕರರನ್ನು ಕಾಲ ಕಾಲಕ್ಕೆ ನೇಮಕಾತಿ ಮಾಡಲಾಗಿದ್ದು, ನೇಮಕಾತಿ ಪೂರ್ವದಲ್ಲಿ ಸರ್ಕಾರದ ಅನುಮತಿ ಪಡೆದಿರುವುದಿಲ್ಲ. ಆದರೆ ಸರ್ಕಾರಕ್ಕೆ ಈ ಬಗ್ಗೆ ಮಾಹಿತಿ ನೀಡಲಾಗಿದೆ.

ವಿಷಯ 3 : ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ವಿದ್ಯುತ್ ಬಳಕೆಯಲ್ಲಿ ಸೋಲಾರ್ ವಿದ್ಯುತ್ತನ್ನು ಎಷ್ಟು ಬಳಸಲಾಗುತ್ತಿದೆ ಮತ್ತು ಪ್ರತಿವರ್ಷ ಎಷ್ಟು ವಿದ್ಯುತ್ ಬಿಲ್ಲನ್ನು ಪಾವತಿ ಮಾಡಲಾಗುತ್ತಿದೆ, 2020 ರಿಂದ 2024 ರವರೆಗೆ ಸೋಲಾರ್ ವಿದ್ಯುತ್ ಇದ್ದರೂ ವಿದ್ಯುತ್ ಬಿಲ್ ಪಾವತಿ ಈವರೆಗೆ ಎಷ್ಟು ಮಾಡಲಾಗಿದೆ. ಚರ್ಚಿಸಿ ನಿರ್ಣಯಿಸಲು ಕೋರಿದೆ.

**ನಿರ್ಣಯ:** ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿರುವ ಸೋಲಾರ್ ವಿದ್ಯುತ್ ಘಟಕದ ಸಾಮರ್ಥ್ಯವನ್ನು ವೃದ್ಧಿಸುವ ನಿಟ್ಟಿನಲ್ಲಿ, ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಹೆಚ್ಚುವರಿ ಸೋಲಾರ್ ವಿದ್ಯುತ್ ಘಟಕಗಳ ಸ್ಥಾಪಿಸುವ ಪ್ರಸ್ತಾವವನ್ನು ಪರಿಶೀಲಿಸಲು ನಿರ್ಣಯಿಸಲಾಯಿತು.

**ವಿಷಯ 4 :** 2024-25 ರ ಸಾಲಿನ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ಪಾಲಿಸಬೇಕಾದ ನಿಯಮಗಳು ಪಾಲಿಸಲಾಗಿದೆಯ ? ಸಿಂಡಿಕೇಟಿನ ಅನುಮತಿ ಪಡೆದು ನೇಮಕಾತಿ ಮಾಡಲಾಗಿದೆಯಾ? ನೇಮಕಾತಿ ಪಟ್ಟಿಯನ್ನು ಸಿಂಡಿಕೇಟಿನಲ್ಲಿ ಇಟ್ಟು ಅನುಮತಿ ಪಡೆಯಲಾಗಿದೆಯಾ? 2000 ಆಕ್ಟನ ಪ್ರಕಾರ ಅತಿಥಿ ಉಪನ್ಯಾಸಕರ ಮತ್ತು ತಾತ್ಕಾಲಿಕ ನೌಕರರ ನೇಮಕಾತಿಯಲ್ಲಿ ಸಿಂಡಿಕೇಟಿನ ಪಾತ್ರವನ್ನು ಚರ್ಚಿಸಿ ನಿರ್ಣಯಿಸಲು ಕೋರಿದೆ.

**ನಿರ್ಣಯ:** ಅತಿಥಿ ಉಪನ್ಯಾಸಕರ ಮತ್ತು ತಾತ್ಕಾಲಿಕ ನೌಕರರ ನೇಮಕಾತಿ ಪಟ್ಟಿಯನ್ನು ಇನ್ನು ಮುಂದೆ ಸಿಂಡಿಕೇಟಿನ ಅನುಮೋದನೆಗೆ ಮಂಡಿಸಲು ನಿರ್ಣಯಿಸಲಾಯಿತು.

2025-26ನೇ ಸಾಲಿನ ಅತಿಥಿ ಉಪನ್ಯಾಸಕರ ನೇಮಕಾತಿಯ ಸಂದರ್ಭದಲ್ಲಿ ಕಾರ್ಯಭಾರ ವಿಶ್ಲೇಷಣೆ ಮಾಡುವ ಸಮಿತಿಯ ವರದಿಯನ್ನು ಸಿಂಡಿಕೇಟು ಸಭೆಗೆ ಮಂಡಿಸಿ ಅನುಮೋದನೆ ಪಡೆಯಲು ನಿರ್ಣಯಿಸಲಾಯಿತು.

ವಿಷಯ 5 : ಮಂಗಳೂರು ವಿಶ್ವವಿದ್ಯಾಲಯದ ಸಿವಿಲ್ ಮತ್ತು ಇತರ ಕಾಮಗಾರಿಗಳಲ್ಲಿ ಮತ್ತು ವಿಶ್ವವಿದ್ಯಾನಿಲಯದ ಇತರೆ ಅಭಿವೃದ್ಧಿ ಕೆಲಸಗಳ ಟೆಂಡರ್ ಪ್ರಕ್ರಿಯೆ ನಡೆದ ನಂತರದಲ್ಲಿ ಟೆಂಡರ್ ಟೆಕ್ನಿಕಲ್ ಕಮಿಟಿಯನ್ನು ಕರೆದು ಟೆಂಡರ್ ನಂತರದ ತಾಂತ್ರಿಕ ವಿಚಾರಗಳ ಪರಿಶೀಲನೆ ನಡೆಸುವುದು ಕ್ರಮಬದ್ಧವಾಗಿರುತ್ತದೆ. ಈ ವಿಷಯದ ಬಗ್ಗೆ ಚರ್ಚಿಸಿ ನಿರ್ಣಯಿಸಲು ಕೋರಿದೆ,

**ನಿರ್ಣಯ:** ಟೆಂಡರ್ ಟೆಕ್ನಿಕಲ್ ಕಮಿಟಿ ಬದಲಾಗಿ ಟೆಂಡರ್ ಸಮಿತಿ ಎಂದು ಮರುನಾಮಕರಣಗೊಳಿಸಿ ವ್ಯಾಪ್ತಿಯನ್ನು ಹೆಚ್ಚಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.8:10(2024)

ವಿಷಯ: IQAC, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿನ ನವೆಂಬರ್ 2024ರ ಚಟುವಟಿಕೆಯ ಮುಖ್ಯಾಂಶದ ವರದಿಯನ್ನು ಅವಗಾಹನೆಗೆ ಮಂಡಿಸುವ ಬಗ್ಗೆ.

**ನಿರ್ಣಯ:** IQAC, ವರದಿಯನ್ನು ಸಿಂಡಿಕೇಟು ಸದಸ್ಯರಾದ ಡೀನರು ಸಭೆಗೆ ಮಂಡಿಸಿದರು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.8:11(2024)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಮತ್ತು Kanachur Institute of Medical Sciences, ದೇರಳಕಟ್ಟೆ, ಮಂಗಳೂರು ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.8:12(2024)

ವಿಷಯ: ಡಾ.ರಾಜೇಂದ್ರ ಆರ್., ಸಹ ಪ್ರಾಧ್ಯಾಪಕರು ಹಾಗೂ ಡಾ.ಬಿಷ್ಟಪ್ಪ ಹನುಮಂತಪ್ಪ ತಳವಾರ್, ಸಹ ಪ್ರಾಧ್ಯಾಪಕರು, ಎಫ್.ಎಂ.ಕೆ.ಎಂ.ಸಿ. ಕಾಲೇಜು, ಮಡಿಕೇರಿ ಇವರು ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿಗೆ ವರ್ಗಾವಣೆ ಕೋರಿ ಸಲ್ಲಿಸಿರುವ ಮನವಿಯ ಬಗ್ಗೆ.

**ನಿರ್ಣಯ:** ಸರ್ಕಾರದ ನಿರ್ದೇಶನ ದೊರೆಯುವ ತನಕ ಮುಂದೂಡಲಾಗಿದೆ. ಸರಕಾರದೊಡನೆ ಮಾತನಾಡುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಕಾನೂನು ಘಟಕ:ಸಾ.ಸ.8:13(2024)

ವಿಷಯ: BSR ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ನಡುವಿನ ವಿವಾದದ ಬಗ್ಗೆ Arbitrator ರವರು ಮಾಡಿರುವ Award ನ್ನು ಪ್ರಶ್ನಿಸಿ Commercial Court, ಬೆಂಗಳೂರಿನಲ್ಲಿ ಹೂಡಿರುವ Appeal ನ್ನು ನಿರ್ವಹಿಸುತ್ತಿರುವ ನ್ಯಾಯವಾದಿ ಶ್ರೀ ಟಿ.ಪಿ. ರಾಜೇಂದ್ರ ಕುಮಾರ್ ಸುಂಗೆ ಇವರ ಬಿಲ್ಲು ಪಾವತಿ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ:ಸಾ.ಸ.8:14(2024)

ವಿಷಯ: ಜೂನ್/ಜುಲೈ/ಆಗಸ್ಟ್ 2024ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ / ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಅವ್ಯವಹಾರಗಳು - ದಂಡನೆಯನ್ನು ದೃಢಪಡಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ:ಸಾ.ಸ.8:15(2024)

ವಿಷಯ: ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ಆಟದ ಮೈದಾನವನ್ನು ಬಾಡಿಗೆಗೆ ನೀಡುವ ಬಗ್ಗೆ.

**ನಿರ್ಣಯ:** ಹೊಸದಾಗಿ ಟೆಂಡರು ಕರೆಯಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.8:16 (2024)

ವಿಷಯ: ಯುಜಿಸಿ ನಿಯಮಾವಳಿ 2018ರ ಪ್ರಕಾರ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ ನಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ / ಘಟಕ ಕಾಲೇಜುಗಳ ಬೋಧಕರಿಗೆ ವೃತ್ತಿ ಪದೋನ್ನತಿ - ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಇತರೆ ವಿಷಯಗಳು:**

1) ಅತಿಥಿ ಉಪನ್ಯಾಸಕರ ಕಾರ್ಯಭಾರ ನಿಗದಿಪಡಿಸುವ ಬಗ್ಗೆ ಶೀಘ್ರದಲ್ಲಿ "ಅತಿಥಿ ಉಪನ್ಯಾಸಕರ ನೇಮಕಾತಿ ಮತ್ತು ಸಂಭಾವನೆ ಬಗ್ಗೆ ಮಾರ್ಗಸೂಚಿ ರಚನಾ ಸಮಿತಿ" ಯ ಸಭೆಯನ್ನು ಕರೆದು ಚರ್ಚಿಸಲು ನಿರ್ಣಯಿಸಲಾಯಿತು.

2) ಆಂತರಿಕ ಲೆಕ್ಕ ಪರಿಶೋಧಕರ ನೇಮಕ ಪ್ರಕ್ರಿಯೆಯ ಟೆಂಡರ್‌ನ L1 ಬಿಡ್ಡುದಾರರಿಗೆ ನೇಮಕ ಆದೇಶ ನೀಡಲು ನಿರ್ಣಯಿಸಲಾಯಿತು. ಈ ಬಗ್ಗೆ ಮುಂದಿನ ಸಿಂಡಿಕೇಟಿನ ಘಟನೋತ್ತರ ಅನುಮೋದನೆಗೆ ಕಾರ್ಯಸೂಚಿ ಮಂಡಿಸಲು ತೀರ್ಮಾನಿಸಲಾಯಿತು. L1 ಬಿಡ್ಡುದಾರರಿಗೆ ಆಂತರಿಕ ಲೆಕ್ಕ ಪರಿಶೋಧನೆ ಅವಧಿಯನ್ನು ಪ್ರಾರಂಭದಲ್ಲಿ ಎಪ್ರಿಲ್ 1, 2024 ರಿಂದ ಮಾರ್ಚ್ 31, 2025 ರ ತನಕ ಒಂದು ವರ್ಷದ ಅವಧಿಗೆ ಮಾತ್ರ ನೀಡಲು ನಿರ್ಣಯಿಸಲಾಯಿತು.

3) ಬೆಳಪು ಸಂಶೋಧನಾ ಕೇಂದ್ರಕ್ಕೆ ಸಂಬಂಧಿಸಿದಂತೆ, ಹಣಕಾಸು ಸಮಿತಿ ಸಭೆಯಲ್ಲಿ ಸರ್ಕಾರದ ನಾಮ ನಿರ್ದೇಶನ ಸದಸ್ಯರಾದ ಹಣಕಾಸು ಇಲಾಖೆಯ ಜಂಟಿ ಕಾರ್ಯದರ್ಶಿಗಳ ಸೂಚನೆಯಂತೆ ರೂ. 7.54 ಕೋಟಿ ವಹಿವಾಟಿನ ಕುರಿತು ವಿಸ್ತೃತ ಚರ್ಚೆ ನಡೆಸಲು ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿಯನ್ನು ಮಂಡಿಸಲು ನಿರ್ಣಯಿಸಲಾಯಿತು.

4) ಮಾನ್ಯ ಸದಸ್ಯರಾದ ಡಾ.ಕೆ.ಸಿ. ಮಹದೇಶ ಇವರ ಕೋರಿಕೆ ಮೇರೆಗೆ, ವಿಶ್ವವಿದ್ಯಾನಿಲಯದ ಅಧಿಕೃತ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಯ Hard Copy ಗಳನ್ನು ಸಿಂಡಿಕೇಟು ಸದಸ್ಯರಿಗೆ ಕಳುಹಿಸುವುದರೊಂದಿಗೆ ನಿಯೋಜಿತ ಕಾರ್ಯಕ್ರಮ ಸಂಯೋಜನಾ ಅಧಿಕಾರಿಗಳು ಸಿಂಡಿಕೇಟು ಸದಸ್ಯರನ್ನು ತಪ್ಪದೇ ದೂರವಾಣಿಯ ಮೂಲಕವೂ ಸಂಪರ್ಕಿಸಿ ಆಹ್ವಾನಿಸುವಂತೆ ನಿರ್ಣಯಿಸಲಾಯಿತು.

5) ವಿಶ್ವವಿದ್ಯಾನಿಲಯದಿಂದ ಪಾವತಿಗೆ ಬಾಕಿ ಇರುವ ಕಾಮಗಾರಿ ಮತ್ತು ಇತರೇ ಎಲ್ಲಾ ಬಿಲ್ಲುಗಳ ಹಾಗೂ ಮರು ಪಾವತಿಗೆ ಬಾಕಿ ಇರುವ ಭದ್ರತಾ ಠೇವಣಿಗಳ ವಿವರಗಳನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

6) ಮಾನ್ಯ ಸದಸ್ಯರಾದ ಶ್ರೀ ನಿತಿನ್ ಜೆ. ಶೆಟ್ಟಿ ಇವರ ಸಲಹೆ ಮೇರೆಗೆ, ಸಪ್ಟೆಂಬರ್ 30, 2024 ರಂದು ಇದ್ದಂತೆ (as on 30.9.2024) ಹಣಕಾಸು ವಹಿವಾಟುಗಳನ್ನು ದಾಖಲಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ಸೂಚಿಸಿ, ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

7) Pension Fund ಮತ್ತು Gratuity Fund ನ್ನು ಪ್ರಾರಂಭಿಸುವ ಬಗ್ಗೆ ಭಾರತೀಯ ಜೀವವಿಮಾ ನಿಗಮ (ಎಲ್.ಐ.ಸಿ.) ಅಧಿಕಾರಿಗಳ ಜೊತೆ ಚರ್ಚಿಸಿ, ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

8) ಕಾರ್ಯಸೂಚಿಗಳನ್ನು ಮಂಡಿಸುವಾಗ ನ್ಯಾಯಾಲಯಗಳ ಆದೇಶಗಳಿದ್ದಲ್ಲಿ ಅವುಗಳ ಪ್ರತಿಗಳನ್ನು ತಪ್ಪದೇ ಅನುಬಂಧದಲ್ಲಿ ಲಗತ್ತಿಸಲು ಸೂಚಿಸಲಾಯಿತು.

9) ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ ಸಭೆಯಲ್ಲಿ ನೀಡಿದ ಸೂಚನೆಯಂತೆ ಸ್ಥಳೀಯ ವಿಚಾರಣಾ ಸಮಿತಿಗೆ ಸಿಂಡಿಕೇಟು ಸದಸ್ಯರನ್ನು ಸೇರ್ಪಡೆಗೊಳಿಸುವ ಬಗ್ಗೆ ಕುಲಸಚಿವರಿಗೆ ಸರ್ಕಾರದಿಂದ ಮಾಹಿತಿ ಪಡೆಯಲು ಸೂಚಿಸಲಾಗಿದ್ದ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಪತ್ರ ಬರೆಯಲಾಗಿರುತ್ತದೆ.
ಸ್ಥಳೀಯ ವಿಚಾರಣಾ ಸಮಿತಿಗೆ ಸದಸ್ಯರನ್ನು ಆಯ್ಕೆ ಮಾಡುವ ಮುನ್ನ ಸಿಂಡಿಕೇಟಿನ ಗಮನಕ್ಕೆ ತರುವಂತೆ ನಿರ್ಣಯಿಸಲಾಯಿತು.

10) ಮಾನ್ಯ ಸದಸ್ಯರಾದ ಶ್ರೀ ರಘುರಾಜ್ ಇವರು, UUCMS ಗೆ ಸಂಬಂಧಿಸಿದ ಸಮಸ್ಯೆಗಳ ಮಾಹಿತಿಯನ್ನು ನೀಡುವಂತೆ ಈಗಾಗಲೇ ಕೋರಿದ್ದು, ಸದರಿ ಮಾಹಿತಿಯನ್ನು ಕೂಡಲೇ ಕುಲಸಚಿವ (ಪರೀಕ್ಷಾಂಗ) ಇವರು ಮಾನ್ಯ ಸದಸ್ಯರಿಗೆ ನೀಡಲು ಸೂಚಿಸಲಾಯಿತು.

11) ಸಭಾಂಗಣಕ್ಕೆ ನಿಗದಿಪಡಿಸಲಾಗಿರುವ ಬಾಡಿಗೆ ದರದ ವಿವರಗಳನ್ನು ಕೂಡಲೇ ಮಾನ್ಯ ಸಿಂಡಿಕೇಟು ಸದಸ್ಯರುಗಳಿಗೆ ನೀಡುವಂತೆ ನಿರ್ಣಯಿಸಲಾಯಿತು.

12) 2025ನೇ ವರ್ಷದ ಮಂಗಳೂರು ವಿಶ್ವವಿದ್ಯಾನಿಲಯದ ಕ್ಯಾಲೆಂಡರನ್ನು ಸಿಂಡಿಕೇಟು ಸಭೆಯಲ್ಲಿ ಬಿಡುಗಡೆಗೊಳಿಸಲಾಯಿತು.

13) ಮುಂದಿನ ಸಿಂಡಿಕೇಟು ಸಭೆಯನ್ನು ದಿನಾಂಕ 17.01.2025ರಂದು ನಡೆಸಲು ನಿರ್ಣಯಿಸಲಾಯಿತು.

**ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.**

| | |
|---|---|
| ಸಹಿ/- | ಸಹಿ/- |
| **ಕುಲಸಚಿವರು** | **ಕುಲಪತಿಯವರು** |